# ಮರೆಯಾಗುತ್ತಿರುವ ಮಾಪಾಳ ಕಾಯಿ

ಚಿತ್ರ ಬರಹ:
**ಸೌಖ್ಯ ಮೋಹನ್ ತಲಕಾಲುಕೊಪ್ಪ**

ಇರುವೆ ಕಚ್ಚಿದರೂ ತಕ್ಷಣ ಚರ್ಮದ ಉರಿಯೂತ. ಕೀಟಗಳು ಕಚ್ಚಿ ಗಾಯವಾಗುವಂತಹ ಚರ್ಮದವರಿಗೆ ಉತ್ತಮ ಮನೆಮದ್ದು ಮಾಪಾಳಕಾಯಿ. ಇದನ್ನು ಒಂದೊಂದು ಕಡೆ ಒಂದೊಂದು ಹೆಸರಿನಿಂದ ಕರೆಯುತ್ತಾರೆ. ಸಮುದ್ರಫಲ, ಮಾಫಲ, ಸಮುದ್ರ ಹಾಗಲ ಹೀಗೆ. ಇದರ ವೈಜ್ಞಾನಿಕ ಹೆಸರು ಬ್ಯಾರಿಂಗ್ಟೋನಿಯ ಅಕ್ಯುಟಾಂಗ್ಯುಲ.

ಇದು ಹೆಚ್ಚಾಗಿ ಪಶ್ಚಿಮ ಘಟ್ಟ ಹಾಗೂ ಕರಾವಳಿ ಪ್ರದೇಶದಲ್ಲಿ ಕಂಡುಬರುತ್ತದೆ. ಹೊಳೆದಂಡೆ, ನದಿಯ ತೀರಗಳಲ್ಲೇ ಹೆಚ್ಚಾಗಿದೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗೂ ಹೂ ಬಿಡುತ್ತದೆ. ಇದರ ಹೂ, ದಾರದಲ್ಲಿ ಹೂ ಜೋಡಿಸಿ ಇಳಿ ಬಿಟ್ಟಂತೆ ಕಾಣುತ್ತದೆ. ಹೂ, ಕಾಯಿ, ತೊಗಟೆ ಎಲ್ಲಾ ಭಾಗಗಳು ಉಪಯುಕ್ತ. ಒಗರು ಹಾಗೂ ಕಹಿ ರುಚಿ. ಬ್ಯಾಕ್ಟೀರಿಯಾ, ಫಂಗಸ್ ಹಾಗೂ ಕೀಟಕಡಿತದ ತೊಂದರೆಗೆ ಔಷಧ. ಕಾಯನ್ನು ಒಣಗಿಸಿ ಇಟ್ಟುಕೊಂಡರೆ ಹಲವಾರು ವರ್ಷ ಬಳಸಬಹುದು. ಒಣಗಿದ ಕಾಯಿಯ ಪುಡಿಯ ಹೊಗೆ ತೆಗೆದುಕೊಳ್ಳುವುದರಿಂದ ತಲೆನೋವು ಕಡಿಮೆಯಾಗುತ್ತದೆ. ಇದರ ಅತಿ ಎಳೇಕಾಯಿಗಳಿಂದ ಪಲ್ಯ ತಯಾರಿಸುವ ಪದ್ಧತಿ ಮಲೆನಾಡಿನ ಕೆಲವು ಭಾಗದಲ್ಲಿದೆ.

ಜೇನು ಕಚ್ಚಿದಾಗ ಇದರ ಒಣಗಿದ ಕಾಯನ್ನು ನೀರಿನಲ್ಲಿ ತೇಯ್ದು ಬರುವ ಗಂಧವನ್ನು (ಸುಮಾರು ಕಾಲು ಚಮಚ) ನೆಕ್ಕಲು ಕೊಡುತ್ತಾರೆ. ಜೊತೆಗೆ ಕಚ್ಚಿದ ಭಾಗಕ್ಕೂ ಹಚ್ಚುವುದರಿಂದ ನೋವು ಕಡಿಮೆಯಾಗುತ್ತದೆ. ದೇಹದ ಒಳಗಿನ ನಂಜು ನಿವಾರಣೆ. ಕಜ್ಜಿ, ತುರಿಕೆ, ಹುಣ್ಣು ಹಾಗೂ ಕೀಟ ಕಚ್ಚಿದ ಗಾಯಗಳಿಗೆ ಇದರ ಗಂಧ ಯುಪಯುಕ್ತ. ಇದು ಉಷ್ಣಕಾರಕವಾದ್ದರಿಂದ ತೆಗೆದುಕೊಳ್ಳುವ ಪ್ರಮಾಣ ಬಹಳ ಮುಖ್ಯ.





ಇದರ ಬಳಕೆಯ ಬಗ್ಗೆ ಆಯುರ್ವೇದದಲ್ಲಿ ವಿವರಗಳಿವೆ. ಪಿತ್ತ ಮತ್ತು ಕಫಹರ, ಚರ್ಮದ ಕಾಯಿಲೆಯಲ್ಲಿ ಉಪಯುಕ್ತ, ಅಜೀರ್ಣ, ಅತಿಸಾರ ಕಡಿಮೆ ಮಾಡುತ್ತದೆ. ರಕ್ತಶುದ್ಧಿಕಾರಕ. ಕಫವನ್ನು ಹೊರಗೆ ಹಾಕಲು ಸಹಕಾರಿಯಾಗುವುದರಿಂದ ಶ್ವಾಸದ ಸಮಸ್ಯೆ ಪರಿಹಾರವಾಗುತ್ತದೆ ಎನ್ನುವ ಉಲ್ಲೇಖವಿದೆ.

ಈ ಮರದ ಪರಿಚಯ ಈಗಿನವರಿಗೆ ಕಡಿಮೆ. ಅನವಶ್ಯಕ ಮರ ಕಡಿತದಿಂದ ಇದರ ಸಂತತಿಯೂ ನಶಿಸುತ್ತಿದೆ. ಇದನ್ನು ಸಂರಕ್ಷಿಸಿ ಬೆಳೆಸುವ ಜರೂರತ್ತಿದೆ.